UASB Library
Newspaper Clippings
Saturday 18-06-2022 Pg .1
Jai Kisan

ಉದ್ಯಮಕ್ಕೆ ಬೀಳಲಿದೆ ಕೊಡಲಿಪೆಟ್ಟು | ವಿ. ಬಾಲಸುಬ್ರಮಣ್ಯಂ ಆತಂಕ


ರೇಷ್ಮೆ ಬಿತ್ತನೆ ಮೊಟ್ಟೆಗೆ ಗಂಟುರೋಗ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು ಗ್ರಾಮಾಂತರ ರೇಷ್ಮೆ ಬಿತ್ತನೆ ಮೊಟ್ಟೆಗಳಿಗೆ ತೀವ್ರವಾಗಿ ಹರಡುತ್ತಿರುವ ಗಂಟುರೋಗ (ಪೆಬ್ರಿನ್) ಸೋಂಕನ್ನು ತಕ್ಷಣವೇ ನಿಯಂತ್ರಿಸದಿದ್ದರೆ ವರ್ಷದೊಳಗೆ ರೇಷ್ಮೆ ಉದ್ಯಮಕ್ಕೆ ಕೊಡಲಿಪೆಟ್ಟು ಬೀಳಲಿದೆ ಎಂದು ಭಾರತೀಯ ರೇಷ್ಮೆ ಒಕ್ಕೂಟ (ಸಿಲ್ಕ್ ಅಸೋಸಿಯೇಷನ್ ಇಂಡಿಯಾ) ಅಧ್ಯಕ್ಷ ಹಾಗೂ ರಾಜ್ಯ ಸರ್ಕಾರದ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ವಿ. ಬಾಲಸುಬ್ರಮಣ್ಯಂ ಆತಂಕ ವ್ಯಕ್ತಪಡಿಸಿದ್ದಾರೆ.

» ಕ್ರಮ ಕೈಗೊಳ್ಳಿ
» ಸರ್ಕಾರಕ್ಕೆ ಸಲಹೆ

ವರ್ಷದ ಆರಂಭದಲ್ಲಿ ಕಾಣಿಸಿಕೊಂಡ ತಾಯಿ ಚಿಟ್ಟೆಯಿಂದ ಹರಡುವ ಸೋಂಕು ಡಿಸೆಂಬರ್‌ನಲ್ಲಿ ಉಲ್ಬಣಗೊಳ್ಳಲಿದೆ ಎಂದು ರೇಷ್ಮೆ ತಜ್ಞರು ವರದಿ ನೀಡಿದ್ದಾರೆ. ಹೀಗಾಗಿ, ಬಿತ್ತನೆ ಪ್ರದೇಶಗಳಲ್ಲಿ ಚಿಟ್ಟೆ ಪರೀಕ್ಷೆ, ಸೋಂಕು ನಿವಾರಣೆ, ಸಾಮೂಹಿಕ ಸೋಂಕು ನಿವಾರಣೆ ಹಾಗೂ ಬಿತ್ತನೆ ಮಾರುಕಟ್ಟೆಯಲ್ಲಿ ನೂಲು ಬಿಚ್ಚಾಣಿಕೆಗೆ ಹೋಗುವ ಗೂಡಿಗೆ ಹಬೆ ನೀಡುವ ಕ್ರಮಗಳನ್ನು ಕೈಗೊಳ್ಳಬೇಕು. ಸೋಂಕಿತ ರೇಷ್ಮೆ ಮೊಟ್ಟೆಗಳನ್ನು ಹಾಗೂ ಹುಳುಗಳನ್ನು ಸುಟ್ಟು ಹಾಕಬೇಕು. ತಜ್ಞ ಸಿಬ್ಬಂದಿಯನ್ನು ಕೂಡಲೇ ಗಂಟುರೋಗ ಸೋಂಕಿತ ಪ್ರದೇಶಗಳಿಗೆ ನಿಯೋಜಿಸಿ ಗುಣಮಟ್ಟ ಪರೀಕ್ಷೆ ಮಾಡಿಸಿ ರೋಗ ನಿಯಂತ್ರಣಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದ್ದಾರೆ.

ಈ ಹಿಂದಿನ ಕ್ರಮವನ್ನೇ ಅನುಸರಿಸಬೇಕು: ರಾಜ್ಯದಲ್ಲಿ ಈಗಾಗಲೇ 46 ಬ್ಯಾಚ್‌ಗಳಲ್ಲಿ ರೋಗಾಣು ಕಂಡುಬಂದಿದೆ, ಇದರ ಸಂತತಿಯನ್ನು ಸಂಪೂರ್ಣ ನಾಶಪಡಿಸಬೇಕು, ರೇಷ್ಮೆ ಸಾಕಣೆ ಮನೆಗಳಲ್ಲಿ


ಚಿಟ್ಟೆಯಿಂದ ಹರಡುವ ಸೋಂಕು

ನಿಯಂತ್ರಣಕ್ಕೆ ಮನವಿ

ರೇಷ್ಮೆ ಸಚಿವ ನಾರಾಯಣಗೌಡ ಹಾಗೂ ರೇಷ್ಮೆ ಆಯುಕ್ತರಾದ ಸಿಂಧೂ ಬಿ ರೂಪೇಶ್ ಜತೆಗೆ ಈಗಾಗಲೇ ಹಲವು ಸುತ್ತಿನ ಮಾತುಕತೆ ನಡೆಸಿದ್ದು ಗಂಟು ರೋಗ ಹಾವಳಿ ನಿಯಂತ್ರಿಸಲು ಮನವಿ ಮಾಡಿರುವುದಾಗಿ ಸಿಲ್ಕ್ ಅಸೋಸಿಯೇಷನ್ ಆಫ್ ಇಂಡಿಯಾ ತಿಳಿಸಿದೆ.

ಸೋಂಕು ನಿವಾರಿಸಬೇಕು, ಬಿತ್ತನೆ ಕೋಠಿ ಪಿ4, ಪಿ3, ಪಿ2 ಮತ್ತು ಪಿ1 ಹಂತದಲ್ಲಿ ರೋಗ ಪತ್ತೆಹಚ್ಚಿ ನಿವಾರಿಸಬೇಕು. 1991-92ನೇ ಸಾಲಿನಲ್ಲಿ ರಾಜ್ಯದಲ್ಲಿ ಗಂಟುರೋಗ ಉಲ್ಬಣಗೊಂಡಿದ್ದಾಗ ಅನುಸರಿಸಿದ್ದ ಕ್ರಮಗಳನ್ನು ಈಗಲೂ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ರೇಷ್ಮೆ ಇಲಾಖೆ ಶೇಕಡ 1.5ರಿಂದ 2 ಬಿತ್ತನೆ ಮೊಟ್ಟೆಗಳಿಗೆ ಸೋಂಕು ತಗುಲಿದೆ ಎಂದಿದ್ದಾರೆ. ವಾಸ್ತವವಾಗಿ ಶೇ.20 ಮೊಟ್ಟೆಗಳಿಗೆ ರೋಗ ತಗುಲಿದೆ. ಈ ಹಂತದಲ್ಲಿ, ರಾಜ್ಯ ಹಾಗೂ ಕೇಂದ್ರ ಸರ್ಕಾರ ನಿರ್ಲಕ್ಷ ಮಾಡಿದರೆ ಉದ್ಯಮಕ್ಕೆ ಭಾರಿ ಪೆಟ್ಟುಬೀಳಲಿದೆ ಎಂದು ಎಚ್ಚರಿಸಿದ್ದಾರೆ.

ರಾಜ್ಯಕ್ಕೆ ರೇಷ್ಮೆ ಇತಿಹಾಸ

ರಾಜ್ಯದಲ್ಲಿ ರೇಷ್ಮೆ ಕೃಷಿಗೆ 200 ವರ್ಷದ ಇತಿಹಾಸವಿದೆ. ರೇಷ್ಮೆ ಉತ್ಪಾದನೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದರೆ ಭಾರತ 2ನೇ ಸ್ಥಾನದಲ್ಲಿದೆ. ಇದರಲ್ಲಿ ರಾಜ್ಯದ ಪಾಲು ಶೇ.70ಕ್ಕಿಂತಲೂ ಹೆಚ್ಚಿತ್ತು, ಆದರೆ, ಇದೀಗ 50ಕ್ಕಿಂತಲೂ ಕಡಿಮೆ ಆಗಿದೆ. ಚೀನಾ ರೇಷ್ಮೆ ಉತ್ಪಾದನೆ ಎರಡು ವರ್ಷದ ಹಿಂದೆ 1,60,00 ಮೆಟ್ರಿಕ್ ಟನ್‌ಗಳಷ್ಟಿತ್ತು ಪ್ರಸ್ತುತ 55,300 ಮೆಟ್ರಿಕ್ ಟನ್‌ಗಳಿಗೆ ಕುಸಿದಿದೆ. ಈ ಪರಿಸ್ಥಿತಿಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸದ್ಬಳಕೆ ಮಾಡಿಕೊಳ್ಳುವಲ್ಲಿ ವಿಫಲವಾಗಿವೆ ಎಂದು ಬಾಲಸುಬ್ರಮಣ್ಯಂ ಬೇಸರ ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಂಡಲ್ಲಿ ದೇಶ ರೇಷ್ಮೆ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಮೊದಲ ಸ್ಥಾನ ಪಡೆಯಲಿದ್ದು, ಆರ್ಥಿಕವಾಗಿ ತೊಂದರೆಯಲ್ಲಿರುವ ರೈತಾಪಿ ವರ್ಗಕ್ಕೆ ಸಹಕಾರಿಯಾಗಲಿದೆ ಹಾಗೂ ವಿದೇಶಿ ಅವಲಂಬನೆ ತಪ್ಪಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ರೇಷ್ಮೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಚಿಟ್ಟೆ ಪರೀಕ್ಷಕರ ಕೊರತೆಯಿಂದಾಗಿ ರೋಗ ಉಲ್ಬಣಗೊಂಡಿದೆ. ಮತ್ತೊಂದೆಡೆ, ಸರ್ಕಾರಗಳ ಸಂಶೋಧನಾ ಸಂಸ್ಥೆಗಳಲ್ಲಿ ಬೆರಳೆಣಿಕೆಯಷ್ಟು ವಿಜ್ಞಾನಿಗಳಿದ್ದು, ಅವೂ ಮುಚ್ಚುವ ಹಂತದಲ್ಲಿವೆ. ಸಂಸ್ಥೆ ಬಲಪಡಿಸಿ ಸಮರ್ಥ ವಿಜ್ಞಾನಿಗಳನ್ನು ನೇಮಿಸಬೇಕು ಎಂದು ಒತ್ತಾಯಿಸಿದ್ದಾರೆ.

18-06-2022
Vv Pg 2A



47,000 ಟನ್
ಅಮೆರಿಕದಿಂದ ಆಮದಾಗಲಿರುವ ಯೂರಿಯಾ ಪ್ರಮಾಣ

56,000 ರೂ.
ಆಮದಾಗಲಿರುವ ಯೂರಿಯಾದ ಪ್ರತಿ ಟನ್‌ನ ಬೆಲೆ

1.65 ಮೆ.ಟನ್
ವಿವಿಧ ದೇಶಗಳಿಂದ ಸದ್ಯದಲ್ಲೇ ಬರಲಿರುವ ಯೂರಿಯಾ

2021-22ರಲ್ಲಿ ಬಂದ ಯೂರಿಯಾ

ದೇಶ	ಪ್ರಮಾಣ (ಮೆ.ಟನ್)
ಚೀನಾ	2.79
ಒಮನ್	1.62
ಯುಎಇ	1.06
ಈಜಿಪ್ಟ್	0.75
ಕತಾರ್	0.58
ಸೌದಿ	0.50

ಇತ್ತೀಚೆಗೆ ಕೊಳ್ಳಲಾದ ಯೂರಿಯಾ ಪ್ರಮಾಣ

ವರ್ಷ	ಪ್ರಮಾಣ (ಟನ್)
2019-20	1.47
2020-21	2.19
2021-22	43.71

ಅಮೆರಿಕದ 'ನ್ಯೂ ಓರ್ಲಿಯನ್ಸ್' ಬಂದರಿನಿಂದ ನವ ಮಂಗಳೂರು ಬಂದರಿಗೆ 47 ಸಾವಿರ ಟನ್‌ನಷ್ಟು ಯೂರಿಯಾ ಸದ್ಯದಲ್ಲೇ ಆಗಮಿಸಲಿದೆ. ವಾರಾಂತ್ಯದ ಹೊತ್ತಿಗೆ ದಾಸ್ತಾನು ಭಾರತದ ಕಡೆಗೆ ಪಯಣಿಸಲಿದೆ. ಅಮೆರಿಕದಿಂದ ಭಾರತ ಯೂರಿಯಾ ಖರೀದಿ ಮಾಡಿರುವುದು ಇದೇ ಮೊದಲು.

ದರ ಹೇಗೆ?

ದಕ್ಷಿಣ ಕೊರಿಯಾದ ದೈತ್ಯ ಸಮೂಹ ಸಂಸ್ಥೆಗಳಲ್ಲೊಂದಾದ ಸ್ಯಾಮ್‌ಸಂಗ್ ಯೂರಿಯಾವನ್ನು ಕಳುಹಿಸಲು ಸಜ್ಜಾಗಿದೆ. ಈ ಯೂರಿಯಾವು ಹರಳುಗಳ ರೂಪದಲ್ಲಿ ಭಾರತಕ್ಕೆ ಬರಲಿವೆ. ಅಮೆರಿಕದ ಬಂದರಿನಲ್ಲಿ ರಫ್ತಿಗೆ ಸಿದ್ಧವಾಗಿರುವ ಯೂರಿಯಾ ದಾಸ್ತಾನಿನ ಪ್ರತಿ ಟನ್‌ನ ಬೆಲೆ ಸುಮಾರು 56 ಸಾವಿರ ರೂ. ನಿಗದಿಗೊಳಿಸಲಾಗಿದೆ.

ಕಂಪನಿಗೆ ರವಾನೆ

ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಲಿಮಿಟೆಡ್ ಕಂಪನಿಗೆ, ಅಮೆರಿಕದಿಂದ ಯೂರಿಯಾ ಬರಲಿದೆ. ಮೇ 11ರಂದು ಭಾರತವು ಯೂರಿಯಾ ಸರಬರಾಜಿಗೆ ಆಗ್ರಹಿಸಿ ಗ್ಲೋಬಲ್ ಟೆಂಡರ್ ಜಾರಿಗೊಳಿಸಿತ್ತು. ಅದರನ್ವಯ, ಅಮೆರಿಕ ಸೇರಿದಂತೆ ಹಲವಾರು ರಾಷ್ಟ್ರಗಳಿಂದ ಒಟ್ಟು 1.65 ಮೆಟ್ರಿಕ್ ಟನ್‌ನಷ್ಟು ಯೂರಿಯಾ ಭಾರತಕ್ಕೆ ಬರಲಿದೆ.

18-06-2022
Uv Pg 09

For more information visit
University Library Website
Web - uasbagrilibindia.org
E-mail- librarian@uasbangalore.edu.in

Acute shortage of fertilisers hits Kodagu

KRRS ACTIVISTS PROTEST AGAINST KHUBA IN BIDAR

Bidar: The Karnataka Rajya Raitha Sangha (KRRS) and Hasiru Sene district units protested in Bidar on Friday demanding that Prime Minister Narendar Modi sack Union Minister of State for Chemicals and Fertilisers Bhagawant Khuba for disrespecting farmers. The protesters gathered at Ambedkar Circle and took out a rally to the deputy commissioner's office and submitted a memorandum. The protesters pointed to a recent conversation between Khuba and a farmer from Hedgapur village of Aurad Taluk. In the audio clip, Khuba ridiculed the farmer, who asked the minister about fertiliser shortage, KRRS members said. Khuba, while replying to the farmer, says, "I am a union minister. My job is to provide fertilisers to the state. Ask your MLA and officers". This smacks of arrogance by the minister, they said.

EXPRESS NEWS SERVICE @Madikeri

AN acute shortage of fertilisers has affected agricultural activities across Kodagu, while the agriculture department has assured farmers that relief will come their way by the month-end. The onset of monsoon marks the beginning of agricultural activities in the district and other parts of the state. But in Kodagu, no work has started because of the shortage of fertilisers. The agriculture department has been alerted, as many primary agricultural societies and fertiliser distributors in the district have not been able to meet the demand.

Some experts opined that the shortage is because of the Russia-Ukraine war. "While fertilisers are processed in India, raw materials are imported. Shortage of fertilisers is a global phenomenon and a holistic approach is needed to study the situation. The coffee crop will not have any immediate problem, but the government should speed up the process and enable the import of raw materials to address the shortage," said Vishwanath KK, convener, Karnataka Growers Federation.



The fertiliser spraying work should have begun this month. While now is the right time to feed plants with fertilisers, stocks are not available

Santosh, a grower in Makkandur

Small coffee growers and farmers in the district are worried. "The fertiliser spraying work should have begun this month. We cannot use fertilisers once the rain gets heavier. While now is the right time to feed plants with fertilisers, stocks are not available," said Santosh, a grower in Makkandur.

Agriculture Department Joint Director Shabana M Sheik assured farmers that the issue would be resolved by the month-end. She said that since no rail rakes are available in the district, they have to depend on Hassan and Mysuru districts to get fertilisers. "By June-end, steps will be taken to supply 10,000 metric tonnes of fertilisers to the district," she confirmed.

18-06-2022
Ind Exp Pg 04

ಕುವೈತ್‌ಗೆ ಭಾರತದಿಂದ 192 ಸಾವಿರ ಕೆ.ಜಿ ಸಗಣಿ

ನವದೆಹಲಿ: ಪ್ರವಾದಿ ಮಹಮ್ಮದ್ ವಿರುದ್ಧ ಬಿಜೆಪಿಯ ಉಚ್ಚಾಟಿತ ನಾಯಕಿ ನೂಪುರ್ ಶರ್ಮಾ ಅವರ ನಿಂದನಾತ್ಮಕ ಹೇಳಿಕೆಗೆ ಮುಸ್ಲಿಮ್ ರಾಷ್ಟ್ರಗಳು ತೀವ್ರ ವಿರೋಧ ವ್ಯಕ್ತಪಡಿಸಿರುವ ನಡುವೆಯೇ ಭಾರತವು ಕುವೈತ್‌ಗೆ 192 ಸಾವಿರ ಕೆ.ಜಿ ಸಗಣಿ ರಫ್ತು ಮಾಡಿದೆ. ಸಾವಯವ ಕೃಷಿಗಾಗಿ ಕುವೈತ್‌ಗೆ ಸಗಣಿ ರಫ್ತು ಮಾಡಲಾಗಿದೆ. ಕನಕಪುರ ರೈಲ್ವೆ ನಿಲ್ದಾಣದಿಂದ ಜೂನ್ 15ರಂದು ಮೊದಲ ಬ್ಯಾಚ್‌ನ ಸಗಣಿ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಕಸ್ಟಮ್ ಇಲಾಖೆಯ ಉಸ್ತುವಾರಿಯಲ್ಲಿ ಸಗಣಿಯನ್ನು ಪ್ಯಾಕ್ ಮಾಡುವ ಕಾರ್ಯ ನಡೆಯುತ್ತಿದೆ. ಜೈಪುರದ ಗೋಶಾಲೆಯಿಂದ ಕುವೈತ್‌ನ ಖಾಸಗಿ ಕಂಪನಿಗೆ ಸಗಣಿ ರಫ್ತು ಮಾಡಲಾಗುತ್ತಿದೆ. ಈ ಸಂಬಂಧ ಎರಡು ದೇಶಗಳ ನಡುವೆ ಒಪ್ಪಂದ ಏರ್ಪಟ್ಟಿದೆ ಎಂದು ಮೂಲಗಳು ಹೇಳಿವೆ. ದೇಶಾದ್ಯಂತ ಸಗಣಿ ಕುರಿತು ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಬೆಳೆಗಳ ಉತ್ಪಾದನೆ ಹೆಚ್ಚಿಸಲು, ಹಸುವಿನ ಸಗಣಿ ಬಳಸಿ ಬೆಳೆದ ಬೆಳೆಗಳನ್ನು ತಿನ್ನುವುದರಿಂದ ವಿವಿಧ ರೋಗಗಳಿಂದ ಮುಕ್ತಿ ಪಡೆಯಬಹುದು ಎಂದು ಹಲವಾರು ಅಧ್ಯಯನಗಳು ಹೇಳಿವೆ. ಕುವೈತ್ ಕೂಡ ಹಸುವಿನ ಸಗಣಿ ಬಳಸಿ ಸಾವಯವ ಕೃಷಿ ನಡೆಸುವ ಬಗ್ಗೆ ಸಂಶೋಧನೆ ನಡೆಸುತ್ತಿದೆ. ಕುವೈತ್‌ನಲ್ಲಿ ಕೃಷಿಗಿರುವ ಮುಖ್ಯ ಅನನಕೂಲವೆಂದರೆ ಶುಷ್ಕ ವಾತಾವರಣ ಮತ್ತು ಸಾಕಷ್ಟು ನೀರಿನ ಕೊರತೆ. ಹಾಗಾಗಿ ಕುವೈತ್ ಹಸುವಿನ ಸಗಣಿ ಗೊಬ್ಬರಗಳನ್ನು ಬಳಸಿ ಸಾವಯವ ಕೃಷಿ ನಡೆಸುವತ್ತ ಗಮನ ಹರಿಸಿದೆ.



18-06-2022
Vv Pg 10

ಯಾವುದೇ ಯೋಜನೆ ಪೂರ್ತಿಯಾದ ಮೇಲೆ ನಂಬಿಗಸ್ಥ ರೈತರು ಅದನ್ನು ತಮ್ಮ ಜೀವನವನ್ನಾಗಿ ಮಾಡಿಕೊಳ್ಳುತ್ತಾರೆ. ಅವರು ಆದಾಯಕ್ಕಿಂತ ಆರೋಗ್ಯದ ಕಡೆಗೆ ಒತ್ತು ಕೊಡುತ್ತಾರೆ.

ಈಗ ಸಾವಯವ ಸಿರಿ



ಪೂರ್ಣ ಪರಿಪೂರ್ಣ
ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com

ನಿಮಗೆಲ್ಲಾ ಗೊತ್ತಿರಬಹುದು, ಸಾವಯವ ಗ್ರಾಮ ಯೋಜನೆ. ಇಡೀ ಗ್ರಾಮವನ್ನೇ ಸಾವಯವವನ್ನಾಗಿ ಮಾಡುವ ಪರಿಕಲ್ಪನೆ. ಅದಕ್ಕಾಗಿ ಜನರ ಮನಸ್ಸಿನ ಪರಿವರ್ತನೆ. ರಾಸಾಯನಿಕಗಳ ಕುರಿತು ಸತ್ಯದ ಅನಾವರಣ. ಸಾವಯವದಿಂದ ಆಗುವ ಒಳ್ಳೆಯ ಪರಿಣಾಮಗಳ ಪ್ರಾತ್ಯಕ್ಷಿತೆ. ಹೀಗೆ ಜನರ ಆರೋಗ್ಯ ಮತ್ತು ಮಣ್ಣಿನ ಆರೋಗ್ಯವನ್ನು ಗಮನದಲ್ಲಿ ಇಟ್ಟುಕೊಂಡು ರೂಪಿಸಲಾದ ಸರ್ಕಾರದ ಕಾರ್ಯಕ್ರಮ ಇದಾಗಿತ್ತು. ಇದನ್ನು ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಇಸವಿ 2004ರ ಮಾರ್ಚ್ 24ರಂದು 'ಸಾವಯವ ಕೃಷಿ ನೀತಿ' ಎನ್ನುವ ಹೆಸರಿನಲ್ಲಿ ಜಾರಿಯಾಯಿತು. ಇದು ರಾಷ್ಟ್ರದಲ್ಲೇ ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ಸಾವಯವದ ಅಗತ್ಯವನ್ನು ಮನಗಂಡು ಜಾರಿಯಾದ ಯೋಜನೆ. ಎಲ್ಲಾ 27 ಜಿಲ್ಲೆಗಳಲ್ಲಿ ಒಂದೊಂದು ಗ್ರಾಮವನ್ನು ಗುರುತಿಸಿ ಸುಮಾರು ನೂರು ಹೆಕ್ಟೇರ್ ಪ್ರದೇಶದಲ್ಲಿ ಇದನ್ನು ಕೈಗೊಳ್ಳಲಾಯಿತು. ಹೀಗೆ ಜನರನ್ನು ಸಾವಯವದತ್ತ ನಡೆಸುವ ಯೋಜನೆ ಭಾಗಷಃ ಯಶಸ್ವಿಯೂ ಆಯಿತು. ಇದರಲ್ಲಿ ಕೇವಲ ಕೃಷಿ ಇಲಾಖೆ ಮಾತ್ರವಲ್ಲ, ಪಶುಸಂಗೋಪನಾ ಇಲಾಖೆ, ತೋಟಗಾರಿಕಾ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯಗಳು ಸಹಾ ಭಾಗವಹಿಸಿದ್ದವು. ಬಹುಷಃ ಅಂದಿನಿಂದ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸಾವಯವ ಕೃಷಿ ಕುರಿತಾದ ಪ್ರತ್ಯೇಕ ವಿಭಾಗವೇ ಹುಟ್ಟಿಕೊಂಡಿತು. ಮುಂದೆ ಮೂರು ವರ್ಷಗಳ ಅವಧಿಯಲ್ಲಿ ಸಾವಯವದಿಂದ ಹೊಟ್ಟೆಗೆ ಅನ್ನ ಸಿಗುವುದೇ ಎನ್ನುವ ಅನುಮಾನದಿಂದ ನೂರಾರು ರೈತರು ಹೊರ ಬಂದರು. ಇದು ಕರ್ನಾಟಕದ ಮಹಾನ್ ಸಾಧನೆ ಅಥವಾ ಹೆಮ್ಮೆ ಎಂದೇ ಹೇಳಬಹುದು. ಅಲ್ಲಿಂದ ಒಂದು ಸಾವಯವ ಆಂದೋಲನ ರೂಪುಗೊಂಡಿತು. ಸಾವಯವ ಕೃಷಿ ಮಿಶನ್ ಹುಟ್ಟಿದ್ದು ಆಗಲೇ!! ಇದರ ಮುಂದುವರಿಕೆ ಭಾಗವೇ ತಾಲ್ಲೂಕಿಗೊಂದರಂತೆ ಸಾವಯವ ಗ್ರಾಮಗಳ ಅಭಿವೃದ್ಧಿ. ಅಲ್ಲೂ ಸಹಾ ರೈತರು ಪಾಲ್ಗೊಂಡು ಯೋಜನೆಯನ್ನು ಯಶಸ್ವಿಗೊಳಿಸಿದರು ಮತ್ತು ಶಾವೂ ಬದಲಾವಣೆಯ ಮಾದರಿಗಳಾದರು. ಒಟ್ಟು 274 ತಾಲ್ಲೂಕುಗಳ ಸುಮಾರು ತಲಾ ನೂರು ಹೆಕ್ಟೇರ್ ಪ್ರದೇಶ ಸಾವಯವಕ್ಕೆ ಪರಿವರ್ತನೆಯಾಯಿತು. ಹಾಗಂತಾ ರಾಸಾಯನಿಕಗಳ ಬಳಕೆ ಕಡಿಮೆಯಾಯಿತು ಎಂದಲ್ಲ. ಇಂದಿಗೂ ದಿನೇ ದಿನೇ ರಾಸಾಯನಿಕಗಳ ಬಳಕೆ ಹೆಚ್ಚುತ್ತಲೇ ಇರುವುದಕ್ಕೆ ಕಾರಣ; ಯಾರು ರಾಸಾಯನಿಕಗಳನ್ನು ಬಳಸುತ್ತಿರುವರೋ ಅವರು ಬಳಸುವ ಪ್ರಮಾಣ ಹೆಚ್ಚುತ್ತಿರುವುದು. ಇದು ಮಣ್ಣಿನ ಆವನತಿಗೆ ಕಾರಣವಾಗುತ್ತಿದೆ. ತರಕಾರಿಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವ ನೆಲಮಂಗಲ ತಾಲ್ಲೂಕಿನ ಕೃಷಿ ಪ್ರದೇಶದ ಮಣ್ಣು ಸಂಪೂರ್ಣ ಬರಡಾಗಿದೆ. ಯಾವುದೇ ಬೆಳೆಯನ್ನೂ ಬೆಳೆಯಲು ಯೋಗ್ಯವಾಗಿಲ್ಲ. ಹೀಗಾದಾಗ ರೈತ ಮತ್ತೆ ದೃಷ್ಟಿ ಹಾಯಿಸುವುದು ಸರ್ಕಾರದ ಕಡೆಗೆ.

ಯಾವುದೇ ಯೋಜನೆ ಪೂರ್ತಿಯಾದ ಮೇಲೆ ನಂಬಿಗಸ್ಥ ರೈತರು ಅದನ್ನು ತನ್ನ ಜೀವನವನ್ನಾಗಿ ಮಾಡಿಕೊಳ್ಳುತ್ತಾರೆ. ಅವರು ಆದಾಯಕ್ಕಿಂತಲೂ ಆರೋಗ್ಯದ ಕಡೆಗೆ ಒತ್ತು ಕೊಡುತ್ತಾರೆ. ಐಶಾರಾಮಕ್ಕಿಂತಲೂ ಸುಸ್ಥಿರತೆಗೆ ಆದ್ಯತೆ ನೀಡುತ್ತಾರೆ. ವೈಭೋಗಕ್ಕಿಂತಲೂ ನೆಮ್ಮದಿಯನ್ನು ಪಡೆಯುತ್ತಾರೆ. ಆದರೆ ಸಂಕ್ರಮಣದ ಮೆಟ್ಟಿಲಿನಲ್ಲಿರುವ ರೈತರು ಅತ್ತಲೋ ಇತ್ತಲೋ ಎನ್ನುವ ಗೊಂದಲದಲ್ಲಿ ಮತ್ತೆ ಹಣದ ಕಡೆಗೆ ಹೊರಳುತ್ತಾರೆ. ಹಣದಿಂದ ಎಲ್ಲವನ್ನೂ ಕೊಳ್ಳಬಹುದು ಎಂದು ತೀರ್ಮಾನಿಸಿ ಕೊಳ್ಳುಬಾಕರಾಗುತ್ತಾರೆ. ರಾಸಾಯನಿಕದ ಜಾಲದೊಳಗೆ ಮತ್ತೆ ಬೀಳುತ್ತಾರೆ. ಯೋಜನೆ ಇರುವವರೆಗೆ ಮಾತ್ರ ಇವರು ಸಕ್ರೀಯರಾಗಿದ್ದು ಯೋಜನೆ ಮುಗಿದ ಮೇಲೆ ಮೊದಲಿನ ಸ್ಥಿತಿಗೇ ಬರುತ್ತಾರೆ. ಅದಕ್ಕಾಗಿ ಸರ್ಕಾರ ಯೋಜನೆಯ ಮುಂದಿನ ಹಂತವನ್ನು ಮತ್ತೆ ಮತ್ತೆ ಕೈಗೊಳ್ಳುತ್ತಲೇ ಇರುತ್ತದೆ.

2013-14ರಲ್ಲಿ ಸಾವಯವ ಗ್ರಾಮ ಕಾರ್ಯಕ್ರಮವನ್ನು 'ಸಾವಯವ ಭಾಗ್ಯ' ಎನ್ನುವ ಮಾರ್ಪಾಡಿನೊಂದಿಗೆ ರಾಜ್ಯದ 750 ಹೋಬಳಿಗಳಿಗೆ ವಿಸ್ತರಿಸಿತು. ಅಲ್ಲೂ ನೂರು ಹೆಕ್ಟೇರ್ ಪ್ರದೇಶವನ್ನು ಸಾವಯವವನ್ನಾಗಿ ಅಭಿವೃದ್ಧಿ ಪಡಿಸುವ ಗುರಿಯಾಗಿತ್ತು. ಇದು ಮೂರನೇ ಹಂತದ ಕಾರ್ಯಕ್ರಮವಾದ ಕಾರಣ ಇದರಲ್ಲಿ ಹಿಂದಿಗಿಂತಲೂ ಹೆಚ್ಚು ಅಂಶಗಳ ಸೇರ್ಪಡೆಯಾಗಿತ್ತು. ಹಿಂದೆ ಎರೆಹುಳು ಗೊಬ್ಬರ, ಕಾಂಪೋಸ್ಟ್ ತಯಾರಿಕೆ, ಹಸಿರೆಲೆ ಗೊಬ್ಬರದ ಉತ್ಪಾದನೆ, ಸಸ್ಯ ಮೂಲ ಕೀಟನಾಶಕಗಳ ತಯಾರಿಕೆ, ಬೆಳೆ ಪರಿವರ್ತನೆ, ಮಿಶ್ರ ಬೆಳೆ ಪದ್ಧತಿ, ವಿವಿಧ ರೀತಿಯ ಪಶು, ಪಕ್ಷಿಗಳ ಸೇರ್ಪಡೆ, ಅಜೋಲ ಬೆಳೆಯುವಿಕೆ ಹೀಗೆ ಸಾಮಾನ್ಯವಾಗಿ ಇರುವ ಸಾಂಪ್ರದಾಯಿಕ ವಿಧಾನಗಳ ಜೊತೆಗೆ ಜೈವಿಕ ಗೊಬ್ಬರಗಳ ಬಳಕೆ,



ಬಯೋಡೈಜೆಸ್ಟರ್ ಪರಿಚಯ, ದ್ರವ ಗೊಬ್ಬರಗಳ ಬಳಕೆ, ಹಣ್ಣಿನ ಬೆಳೆಗಳ ಸೇರ್ಪಡೆ, ಕೃಷಿ ಅರಣ್ಯ ಯೋಜನೆ, ಕೃಷಿ ತೋಟಗಾರಿಕೆ, ದೇಸೀ ಹೈನುಗಾರಿಕೆ, ಸಾವಯವ ದೃಢೀಕರಣ, ಸಾವಯವ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರುಕಟ್ಟೆ, ಸಾವಯವ ಉತ್ಪನ್ನಗಳ ರಫ್ತು ಹೀಗೆ ನಾನಾ ವಿಧಗಳ ತರಬೇತಿಗಳು ಪ್ರಾತ್ಯಕ್ಷಿತೆಗಳನ್ನು ಸೇರಿಸಲಾಗಿತ್ತು.

ಈ ಯೋಜನೆಯನ್ನು ಐದು ಜಿಲ್ಲೆಗಳ 574 ಹೋಬಳಿಗಳಲ್ಲಿ ಜಾರಿಗೊಳಿಸಿ 63,677 ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿಗೆ ಬದಲಿಸಲಾಯಿತು. ಇದರೊಂದಿಗೆ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯಡಿ ಸಹಾ ಹೋಬಳಿ ಮಟ್ಟದಲ್ಲಿ ರೈತರಿಗೆ ಸಹಾಯಧನ ನೀಡಲಾಯಿತು. ಜಿಲ್ಲಾ ಮಟ್ಟದಿಂದ ಆಂತಾರಾಷ್ಟ್ರೀಯ ಮಟ್ಟದವರೆಗಿನ ಸಾವಯವ ಹಾಗೂ ಸಿರಿಧಾನ್ಯ ಮೇಳ, ಸಾವಯವ ಸಂತೆ ಹೀಗೆ ಸಾಕಷ್ಟು ಜನಪ್ರಿಯ ಕಾರ್ಯಕ್ರಮಗಳ ಮೂಲಕ ರೈತರಿಗೆ, ಗ್ರಾಹಕರಿಗೆ, ಉದ್ದಿಮೆದಾರರಿಗೆ ಅನುಕೂಲತೆಗಳನ್ನು ಮಾಡಿಕೊಡಲಾಯಿತು. ಸಾವಯವ ಪ್ರಾಮಾಣೀಕರಣ ಪತ್ರ ಪಡೆದ ಉತ್ಪಾದಕರು ಉತ್ಪಾದಿಸುತ್ತಿರುವ 4.58 ಲಕ್ಷ ಟನ್ ಸಾವಯವ ಉತ್ಪನ್ನಗಳನ್ನು ಇಂದು ನಮ್ಮ ದೇಶವು ರಫ್ತು ಮಾಡುತ್ತಿದೆ. ಆದರಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಸಾವಯವ ಕೃಷಿ ವಿಸ್ತೀರ್ಣದಲ್ಲಿ ಐದನೆಯ ಸ್ಥಾನದಲ್ಲಿದೆ. ಅಂದರೆ ನಮ್ಮ ರಾಜ್ಯದಲ್ಲಿ 93,963 ಹೆಕ್ಟೇರ್ ಪ್ರದೇಶವು ಸಾವಯವ ಪ್ರಮಾಣ ಪತ್ರ ಪಡೆದಿದೆ. ಹಾಗೂ ಅದರಿಂದ ಉತ್ಪಾದನೆಯಾಗುತ್ತಿರುವ ಸಾವಯವ ಉತ್ಪನ್ನಗಳ ಪ್ರಮಾಣ 2,82,633 ಟನ್.

ಆಂತರಿಕ ಆರ್ಥಿಕ ಸಬಲೀಕರಣ

ಭಾರತವು ವಿಶ್ವದಲ್ಲೇ ಅತೀ ಹೆಚ್ಚು ಸಾವಯವ ಉತ್ಪಾದಕರನ್ನು ಹೊಂದಿರುವ ದೇಶ. ಸುಮಾರು 30% ಸಾವಯವ ಉತ್ಪಾದಕರು 3.56 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ 1.7 ಮಿಲಿಯನ್ ಟನ್ ಸಾವಯವ ವಸ್ತುಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ. ಆದರೂ ಇದು ರಾಸಾಯನಿಕಗಳ ಬಳಕೆಯನ್ನು ಕಡಿಮೆ ಮಾಡಿಲ್ಲದಿರುವುದು ಆತಂಕ ಹುಟ್ಟಿಸುವ ಸಂಗತಿ. ಅಂದರೆ ಸಾವಯವದ ಕಡೆ ಇನ್ನಷ್ಟು ರೈತರನ್ನು ಕರೆದೊಯ್ಯಬೇಕಾಗಿರುವ ಅಗತ್ಯವನ್ನು ಇದು ತೋರಿಸುತ್ತದೆ. ಒಂದು ಅಧ್ಯಯನ ಹೇಳುವಂತೆ; ಸಾವಯವ ಕೃಷಿಯನ್ನು ಲಾಗಾಯ್ತಿನಿಂದ ಮಾಡುವವರ ಪದ್ಧತಿಗಳು ಅವರನ್ನು ನೆಮ್ಮದಿಯಲ್ಲಿ ಇಟ್ಟಿವೆ. ಅವರ ಜೀವನಶೈಲಿ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಸುಸ್ಥಿರವಾಗಿದೆ. ಅನೇಕರು ತಮ್ಮ ಉತ್ಪಾದನೆಗಳನ್ನು ರಫ್ತು ಮಾಡಿ ಶ್ರೀಮಂತರೂ ಆಗಿದ್ದಾರೆ. ಅವರ ಕೃಷಿ ಭೂಮಿಯ ಮಣ್ಣು ಫಲವತ್ತಾಗಿದ್ದು, ಜೈವಿಕ ಗುಣ ತುಂಬಾ ಚೆನ್ನಾಗಿದೆ. ಅವರು ಸ್ವಾವಲಂಬಿಗಳು, ವೈಜ್ಞಾನಿಕವಾಗಿ ಕೃಷಿ ಮಾಡುವವರು. ಅಂದರೆ ರೈತರು ಬಳಸುವ ರಾಸಾಯನಿಕಗಳೆಲ್ಲಾ ವಿದೇಶೀ ಮೂಲದ್ದು. ಸಾವಯವ ಕೃಷಿಕರು ಯಾವುದೇ ಆಮದು ರಾಸಾಯನಿಕಗಳ ಬಳಕೆ ಮಾಡುವುದಿಲ್ಲ. ಇದರಿಂದ ವಿದೇಶೀ ವಿನಿಮಯದ ಉಳಿತಾಯ. ಇವರು ರಾಸಾಯನಿಕ ಮುಕ್ತ ಉತ್ಪನ್ನಗಳನ್ನು ರಫ್ತು ಮಾಡುವ ಪ್ರಯುಕ್ತ ವಿದೇಶೀ ವಿನಿಮಯದ ಗಳಿಕೆ. ಹೀಗೆ ದೇಶದ ಆಂತರಿಕ ಆರ್ಥಿಕ ಸಬಲೀಕರಣ ಸಾಧ್ಯವಾಗಿದೆ.

ಇದನ್ನೆಲ್ಲಾ ಪರಿಗಣಿಸಿದ ಸರ್ಕಾರ ಇನ್ನಷ್ಟು ರೈತರನ್ನು ಸಾವಯವದ ಹಾದಿಯಲ್ಲಿ ನಡೆಸಲು ಮುಂದಾಗಿದೆ. ಆದರ ಫಲಿತಾಂಶವೇ 'ಸಾವಯವ ಸಿರಿ'ಯ ಅನುಷ್ಠಾನ. ಗೋಶಾಲೆ ಇರುವ, ಹತ್ತು ಎಕರೆ ಜಮೀನಿನಲ್ಲಿ ಸಾವಯವ ಕೃಷಿ ಮಾಡುತ್ತಿರುವ, ಸಾವಯವ ಕ್ರಾಂತಿಯಲ್ಲಿ ತಮ್ಮನ್ನು ಹಿಂದಿನಿಂದಲೂ ತೊಡಗಿಸಿಕೊಂಡ, ಸಾವಯವ ಕೃಷಿಯಿಂದ ಮಾರುಕಟ್ಟೆಯವರೆಗೆ ಪ್ರತಿಯೊಂದು ಹಂತಗಳ ಅರಿವಿರುವ ಸಂಸ್ಥೆಗೆ ಇದರ ಜವಾಬ್ದಾರಿಯನ್ನು ವಹಿಸಿದೆ. ಪ್ರತಿ ಜಿಲ್ಲೆಗೂ ಒಂದೊಂದು ಸಂಸ್ಥೆಯನ್ನು ಗುರುತಿಸಿ ಮೂರನೇ ಹಂತದ ಯೋಜನೆ ವಿಶೇಷವಾಗಿ ಅನುಷ್ಠಾನಗೊಳ್ಳುವಂತೆ ತನ್ನದೊಂದು ಹಿಡಿತ ಇಟ್ಟುಕೊಂಡೇ ಪ್ರಾರಂಭಮಾಡಿದೆ.

ಇಷ್ಟಾಗಿ ಸಾವಯವ ಕೃಷಿಗೆ ಬದಲಾಗಿ ಬೇಸಾಯ ಮಾಡ ಹೊರಟವರು, ಯೋಜನೆ ಮುಗಿದ ಮೇಲೂ ಸಂಪೂರ್ಣವಾಗಿ ಬದಲಾದರೇ? ಕೊನೆ ಪಕ್ಷ ತಾವಾದರೂ ಸಾವಯವದ ಪದಾರ್ಥಗಳನ್ನು ಉಣ್ಣುತ್ತಿದ್ದಾರಾ? ಮಧ್ಯಮ ಮತ್ತು ಸಣ್ಣ ಕೃಷಿಕರು ಎಷ್ಟು ಬದಲಾವಣೆ ಆದರು? ಸಾವಯವ ಕೃಷಿಯಲ್ಲೂ ರೈತರಿಗೆ ನೇರವಾಗಿ ಆದಾಯ ಸಿಗುತ್ತಿದೆಯಾ ಅಥವಾ ಮಧ್ಯವರ್ತಿಗಳಿಗೋ, ರಫ್ತು ಮಾಡುವವರಿಗೋ?! ಹೀಗೆ ಏನೆಲ್ಲಾ ಅಧ್ಯಯನಗಳು ಆಗಬೇಕಿದೆ. ಒಂದೊಮ್ಮೆ ಸಾವಯವ ಕೃಷಿಕರಿಗೆ ಸೂಕ್ತ ಆದ್ಯತೆ, ಅವರ ಉತ್ಪಾದನೆಗಳಿಗೆ ಸೂಕ್ತ ಬೆಲೆ, ಬೆಂಬಲ ಸಿಗದಿದ್ದರೆ ರೈತರು ಹೆಚ್ಚು ಕಾಲ ಸಾವಯವದಲ್ಲಿ ನಿಲ್ಲುವವರಲ್ಲ. ಕಾರಣ ನಮ್ಮ ದೇಶದ ಆರ್ಥಿಕತೆ, ವಿದ್ಯಾಭ್ಯಾಸ, ಸಾಮಾಜಿಕ ಬದುಕು, ಸಾಂಸ್ಕೃತಿಕ ಜೀವನ ಹೀಗೆ ಎಲ್ಲವೂ ಹಣದ ಮೇಲೆ ತಾಂಡವ ಆಡುತ್ತಿದೆ. ಭ್ರಷ್ಟಾಚಾರದಲ್ಲಿ ಇನ್ನಷ್ಟು ಅಂಕಗಳನ್ನು ಗಳಸುತ್ತಿದ್ದೇವೆ. □

18-06-2022
Hd Pg 06